ಉತ್ತರ ಕನ್ನಡ ಜಿಲ್ಲೆಯ ಕಥನ ಪರಂಪರೆಯ ಮುಖ್ಯವಾದ ಕೊಂಡಿಗಳಲ್ಲಿ ಒಬ್ಬರಾದ ಶ್ರೀಧರ ಬಳಗಾರ ಕುಮಟಾದವರು. ಅವರ ಕಥೆ–ಕಾದಂಬರಿಗಳಲ್ಲಿ ಜೀವದಳೆಯುವ ಲೋಕ ಅಚ್ಚರಿ ಹುಟ್ಟಿಸುವಷ್ಟು ಸೃಜನಶೀಲವಾದುದು. ನಿವೃತ್ತ ಪ್ರಾಧ್ಯಾಪಕರಾದ ಬಳಗಾರರು ಅಂಕಣಕಾರರಾಗಿಯೂ ಪ್ರಸಿದ್ಧರು. 'ಅಧೋಮುಖ', 'ಮುಖಾಂತರ', 'ಇಳೆ ಎಂಬ ಕನಸು', 'ಒಂದು ಫೋಟೋದ ನೆಗೆಟಿವ್' ಹಾಗೂ 'ಅಮೃತಪಡಿ' ಅವರ ಪ್ರಸಿದ್ಧ ಕಥಾ ಸಂಕಲನಗಳು. 'ಮೃಗಶಿರ', 'ವಿಸರ್ಗ' ಮುಖ್ಯವಾದ ಕಾದಂಬರಿಗಳು.

ತರಲು ಹೋದರು.

ಆಗಾಗ ಯಮುನಕ್ಕ ತನ್ನ ವಿವಾಹ ಪೂರ್ವದ ಕಟ್ಟೆಮನೆಯ ಕಥೆಯನ್ನು ನೆನಪಾದಾಗ ಚೂರುಪಾರು ಶ್ರೀಪತಿಗೆ ಹೇಳುತ್ತಿದ್ದಳು. ದೂರದ ಕೆನಡಾದಲ್ಲಿರುವಾಗಲೂ ಒಂದು ಹಳದಿ ಎಲೆ ಬಿದ್ದ ಸದ್ದಿಗೆ, ಮಳೆ ಸುರಿಯುವುದನ್ನು ಕೇಳುತ್ತ ಬಚ್ಚಲಲ್ಲಿ ಬೆಚ್ಚನೆಯ ನೀರಿಗೆ ಸುಖಿಸುವಾಗ, ದಾರಿ ಪಕ್ಕದ ಅನಾಮಿಕ ಹೂವಿನ ಕಂಪಿಗೆ ಅವಳು ಕಟ್ಟುತ್ತಿದ್ದ ಚಿತ್ರದ ಸಾಲು ನೆನಪಾಗುತ್ತಿತ್ತು. ಜನಾರ್ದನನ ತಂದೆ ವಿಶ್ವಾಮಿತ್ರ ಗ್ರಾಮಸೇವಕನಾಗಿದ್ದ. ಕೊನೆಗೂ ಅವನ ಉದ್ಯೋಗ ಕಾಯಂ ಆಗದೆ ನಿವೃತ್ತನಾಗಿದ್ದ. ಅಲೆದಾಟದಲ್ಲೇ ಅವನ ಆಯುಷ್ಯ ಕಳೆದುಹೋದದ್ದರಿಂದ ಜನಾರ್ದನನನ್ನು ಕಟ್ಟೆಮನೆಯಲ್ಲಿ ಓದಲು ಬಿಡಬೇಕಾಯಿತು. ಅವಿಭಕ್ತ ಕಟ್ಟೆಮನೆ ಪರ ಊರಿನ ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನ್ನ–ಆಶ್ರಯ ನೀಡುತ್ತಿದ್ದ ಉಚಿತ ಛತ್ರವಾಗಿತ್ತು. ಜನಾರ್ದನ ಕಾಲೇಜು ಮುಗಿಯುವವರೆಗೆ ಅಲ್ಲೇ ವಸತಿಗಿದ್ದ. ಅವನೊಂದಿಗೆ ಯಮುನಕ್ಕನ ಸಮವಯಸ್ಕ ಇಬ್ಬರು ಸಹೋದರರು ಇದ್ದರು. ಅವರಲ್ಲೊಬ್ಬ ಗಜಾನನ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಇಬ್ಬರೂ ಕ್ರಮವಾಗಿ ರಾಜ್ಯಕ್ಕೆ ಮೂರು ಮತ್ತು ಐದನೇ ರ್‍ಯಾಂಕ್ ಪಡೆದಿದ್ದರು. ಅವರ ಹೆಸರು ಹೈಸ್ಕೂಲಿನ ಹೆಡ್‌ಮಾಸ್ಟರ್ ರೂಮಿನ ಬೋರ್ಡಿನಲ್ಲಿದೆ. ಹತ್ತನೇ ಇಯತ್ತೆಯವರೆಗೆ ಯಮುನಕ್ಕ ಗಿಬ್ ಹೈಸ್ಕೂಲಿಗೆ ಅವರ ಜೊತೆಯಲ್ಲಿ ನೀಲಿ ಸ್ಕರ್ಟಿನಲ್ಲಿ ಓಡಾಡಿದವಳು. ನಸುಕಿಗೆದ್ದು ಅಂಗಳದ ಹೂ ಕೊಯ್ದು, ಬಚ್ಚಲೊಲೆಗೆ ಬೆಂಕಿ ಒಟ್ಟಿ, ಮನೆಯ ಹಿರಿಯ ಅಂತಜ್ಜ ಕರೆದಿಡುತ್ತಿದ್ದ ಹಾಲಿನ ತಂಬಿಗೆಯನ್ನು ಕೊಟ್ಟಿಗೆಯಿಂದ ತಂದು ಕಾಯಿಸಲು ಒಲೆ ಹಚ್ಚಿ ಕಾಯುತ್ತಿದ್ದ ಯಮುನಕ್ಕನ ಕೈಯಲ್ಲಿರಿಸುತ್ತಿದ್ದ. ಬಚ್ಚಲಲ್ಲಿ ಹೊಗೆ ಎದ್ದಾಗ ಯಮುನಕ್ಕನ ಒಲೆಯಿಂದ ಉರಿಯುತ್ತಿದ್ದ ಕೊಳ್ಳಿ ವೈಯ್ದು ಬೆಂಕಿ ಮಾಡುತ್ತಿದ್ದ. ನಿತ್ಯ ಮುಸ್ಸಂಜೆ ಹೊಸ್ತಿಲ ನಂದಾದೀಪದೆದುರು ಕೂತು ಯಮುನಕ್ಕನ ಭಜನೆಗೆ ಜನಾರ್ದನ ತಾಳ ತಟ್ಟುತ್ತಿದ್ದ. ಚಳಿಗಾಲದಲ್ಲಿ ಅನ್ನ ಬೇಯುವವರೆಗೆ ಬೆಳದಿಂಗಳು ತೋರಿಸುತ್ತ ಅಂತಜ್ಜ ಹೇಳುತ್ತಿದ್ದ ಕಥೆಯನ್ನು ಆಲಿಸಲು ಯಾರಿರದಿದ್ದರೂ ಜನಾರ್ದನ ಮತ್ತು ಯಮುನಕ್ಕನ ಹಾಜರಿ ಇದ್ದೇ ಇರುತ್ತಿತ್ತು. ಅಡುಗೆ ಮನೆಯ ಉದ್ದಾದ ಒಳದ ಪಂಕ್ತಿಯಲ್ಲಿ ಜನಾರ್ದನನ ಕೆಳಗೆ ಯಮುನಕ್ಕ ಊಟಕ್ಕೆ ಕೂರುವುದು ಕಾಯಂ ಆಗಿತ್ತು. ವರ್ಷಕ್ಕೆರಡು ಸಲ ಭಯಂಕರ ಡಿಸೆಂಬರ್ ಚಳಿಯಲ್ಲಿ ಮಾಡುತ್ತಿದ್ದ ಹಿರಿಯರ ತಿಥಿಯ ರಾತ್ರಿ ಉಳಿಯುತ್ತಿದ್ದ ನೆಂಟರಿಷ್ಟರಿಗೆ ಹಾಸಿ–ಹೊದೆಯಲು ವಸ್ತ್ರ ಕೊರತೆಯಾಗಿ ಜನಾರ್ದನನ ಹಾಸಿಗೆಯಲ್ಲಿದ್ದ ಕಂಬಳಿ ಮಾಯವಾಗುತ್ತಿತ್ತು. ಬರಿ ಚಾದರದಲ್ಲಿ ನಡುಗುತ್ತಿದ್ದವನಿಗೆ ಬೆಚ್ಚನೆಯ ನಡುಮನೆಯಲ್ಲಿ ಮಲಗುತ್ತಿದ್ದ ಅವಳು ತಾನು ಹೊದೆಯುತ್ತಿದ್ದ ಕಂಬಳಿಯನ್ನು ಹೊದಿಸಿ ಹೋಗುತ್ತಿದ್ದಳು. ಕಣ್ಣು ಮುಚ್ಚಿ ಎಚ್ಚರದಲ್ಲಿರುತ್ತಿದ್ದ ಅಂತಜ್ಜ, 'ಇವ್ರು ಮದ್ವೆ ಆಗುವವರೇ' ಎಂದು ಮನಸಿನಲ್ಲಿ ಅಂದುಕೊಂಡದ್ದು ಹತ್ತು ವರ್ಷಗಳ ನಂತರ ನಿಜವಾಗಿತ್ತು. ಕಟ್ಟೆಮನೆಯ ಅಂಗಳದಲ್ಲಿ ಸೇರಿದ್ದ ದಿಬ್ಬಣದ ಸಭೆಯ ಎದುರು ಮಂಟಪದಲ್ಲಿ ಜಳ್ಳೆ ಅಂಗಿ ಮತ್ತು ದೊಡ್ಡ ಧೋತ್ರ ಉಟ್ಟು ಪೇಟಾ ಬಾಸಿಂಗದ ಭಾರಕ್ಕೆ ತೊನೆದಾಡುತ್ತಿದ್ದ ಸಣಕಲು ಶರೀರದ ವರನಿಗೆ ಲಟ್ ಆಳ್ತನದ ತಾನು ಮಾಲೆ ಹಾಕುವಾಗ ಆದ ಮುಜುಗರವನ್ನು ಯಮುನಕ್ಕ ವರ್ಣಿಸಿದ್ದು ಅದೆಷ್ಟು ಸಲವೊ. ಶ್ರೀಪತಿ ಹುಟ್ಟಿದ್ದು ಕಟ್ಟೆಮನೆಯಲ್ಲಿ. ತಾಯಿಯಾಗಿದ್ದರೂ ಯಮುನಳನ್ನು ಅಕ್ಕ ಎಂದು ಗಜಾನನ ಕರೆಯುವುದನ್ನೇ ಶ್ರೀಪತಿ ರೂಢಿಸಿಕೊಂಡಿದ್ದ.